


بسم اللهِ الرّحمٰن الرّحيم

# ತಬ್ಲೀಗ್ – ಮಾರ್ಗದರ್ಶನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **12–12–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(*ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ* ಹಾಗೂ ಸೂರಃ ನಹ್‌ಲಿನ 126ನೇ ವಚನವನ್ನು *ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್,* ಅದರ ಅನುವಾದವನ್ನು ವಿವರಿಸುತ್ತಾ *ಹೀಗೆ ಹೇಳಿದರು:)*

**ಜಾಣ್ಮೆಯಿಂದಲೂ ಸದುಪದೇಶದಿಂದಲೂ ನಿನ್ನ ಪ್ರಭುವಿನ ಮಾರ್ಗದೆಡೆಗೆ ನೀನು ಜನರನ್ನು ಆಮಂತ್ರಿಸು. ಉತ್ತಮವಾದ ರೀತಿಯಲ್ಲಿ ಅವರೊಡನೆ ವಾಗ್ವಾದ ಮಾಡು. ತನ್ನ ಮಾರ್ಗವನ್ನು ಬಿಟ್ಟು ಹೋಗುವವರು ಯಾರೆಂದು ನಿನ್ನ ಪ್ರಭು ಚೆನ್ನಾಗಿ ಬಲ್ಲವನಾಗಿದ್ದಾನೆ. ಸರಿಯಾದ ಮಾರ್ಗವನ್ನು ಅವಲಂಬಿಸುವವರು ಯಾರೆಂದೂ ಅವನು ಚೆನ್ನಾಗಿ ತಿಳಿದಿರುತ್ತಾನೆ. (16:126).**

(ಹುಝೂರ್ ಹೇಳಿದರು:) ಇತರರ ಮೇಲೆ ಪರಿಣಾಮ ಬೀರುವಂತಾಗಲು ಮತ್ತು ಪ್ರಯೋಜನಕಾರಿಯಾಗಲಿಕ್ಕಾಗಿ ಅತ್ಯುತ್ತಮ ರೀತಿಯಲ್ಲಿ ತಬ್ಲೀಗ್ ಮಾಡಲು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಮಾರ್ಗದರ್ಶನ ನೀಡಿದ್ದಾನೆ. ಇದನ್ನು ಪಾಲಿಸುವವರು ಅಲ್ಲಾಹನ ಅನುಗ್ರಹದಿಂದ ಬಹಳ ಮಟ್ಟಿಗೆ ಯಶಸ್ವಿಯಾಗುತ್ತಾರೆ. ಆದ್ದರಿಂದ, ಈ ತತ್ವವನ್ನು ಯಾವಾಗಲೂ ನಮ್ಮ ಮುಂದೆ ಇರಿಸಬೇಕು.

ಇತ್ತೀಚಿನ ದಿನಗಳಲ್ಲಿ, ಸಾಮಾಜಿಕ ಮಾಧ್ಯಮದ ಕಾರಣದಿಂದ ತಬ್ಲೀಗ್ ಮಾಡುವುದು ತುಂಬಾ ಸುಲಭ ಎಂದು ಜನರು ಭಾವಿಸುತ್ತಾರೆ, ಆದರೆ ತಬ್ಲೀಗಿಗಾಗಿ ಕೆಲವು ನಿಯಮಗಳು ಮತ್ತು ಶಿಷ್ಟಾಚಾರಗಳಿವೆ, ಅವುಗಳನ್ನು ಯಾವಾಗಲೂ ನೆನಪಿನಲ್ಲಿಡಬೇಕು, ಇಲ್ಲದಿದ್ದರೆ ವಿರುದ್ಧ ಪರಿಣಾಮ ಉಂಟಾಗಬಹುದು. ಆದ್ದರಿಂದ ನಾವು ಮಾಡುವ ತಬ್ಲೀಗ್ ಯಾವಾಗಲೂ ಅತ್ಯುತ್ತಮ ಶೈಲಿಯಲ್ಲಿರಬೇಕು ಎಂಬುದನ್ನು ಸದಾ ಗಮನದಲ್ಲಿಡಬೇಕು.

ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ತಬ್ಲೀಗಿನ ಬಗ್ಗೆ ಒಂದು ಪ್ರಮುಖ ಮಾರ್ಗದರ್ಶನ ನೀಡಿದರು. ಅವರು ಹೇಳಿದರು: ಇಸ್ಲಾಮಿಕ ಪಾಠಗಳ ಬಗ್ಗೆ ಸಂಪೂರ್ಣವಾದ ಅರಿವಿಲ್ಲದ, ಅದರ ಉನ್ನತ ಮಟ್ಟದ ಗುಣಗಳ ಬಗ್ಗೆ ತಿಳಿದಿಲ್ಲದ, ಈಗಿನ ಕಾಲದ ಟೀಕೆಗಳಿಗೆ ಸಂಪೂರ್ಣವಾಗಿ ಉತ್ತರ ನೀಡಲು ಸಮರ್ಥರಲ್ಲದ ಮತ್ತು ದೈವಿಕ ಜ್ಞಾನವಿಲ್ಲದವರು ನಮ್ಮ ಪರವಾಗಿ ಪ್ರತಿನಿಧಿಗಳಾಗಿ ಹೋಗುವುದನ್ನು ನಾನು ಎಂದಿಗೂ ಸೂಕ್ತವೆಂದು ಪರಿಗಣಿಸುವುದಿಲ್ಲ. ನಮ್ಮ ಮುಬಲ್ಲಿಗ್‌ರಿಗೆ ಅಲ್ಲಾಹನೊಂದಿಗೆ ಒಂದು ವಿಶೇಷ ಸಂಬಂಧ ಇರಬೇಕು, ಆಗ ಮಾತ್ರ ಅಲ್ಲಾಹನು ಅವರ ಸಹಾಯ ಮಾಡುತ್ತಾನೆ.

ತಬ್ಲೀಗಿನ ಬಗ್ಗೆ ನಾವು ನೆನಪಿನಲ್ಲಿಡಬೇಕಾದ ಮೊದಲ ವಿಷಯವೆಂದರೆ, ಇಡೀ ಜಗತ್ತಿಗಾಗಿ ಅಲ್ಲಾಹನ ಸಂದೇಶವನ್ನು ತಂದ ಏಕ ಧರ್ಮ ಇಸ್ಲಾಮ್ ಆಗಿದೆ ಮತ್ತು ಏಕ ಪ್ರವಾದಿ ಹಝ್ರತ್ ಪೈಗಂಬರ್(ಸ) ಆಗಿದ್ದಾರೆ. ಅಲ್ಲಾಹನು ಹಝ್ರತ್ ಪೈಗಂಬರ್(ಸ)ರನ್ನು ಎಲ್ಲ ಜನರಿಗಾಗಿ, ಎಲ್ಲ ಸಮುದಾಯಗಳಿಗಾಗಿ ಮತ್ತು ಇಡೀ ಲೋಕಕ್ಕಾಗಿ ಶುಭ ಸಮಾಚಾರ ನೀಡುವವರನ್ನಾಗಿಯೂ ಮುನ್ನೆಚ್ಚರಿಕೆ ನೀಡುವವರನ್ನಾಗಿಯೂ ಆಗಿ ಕಳುಹಿಸಿದ್ದಾನೆ.

ಹಝ್ರತ್ ಪೈಗಂಬರ್(ಸ) ಸಹ ತಬ್ಲೀಗಿಗಾಗಿ ಆದೇಶಗಳನ್ನು ನೀಡಿದ್ದಾರೆ ಮತ್ತು ಅವರು ಕೆಲವು ಮಾರ್ಗದರ್ಶನಗಳನ್ನು ನೀಡುತ್ತಿದ್ದರು. ಒಂದು ಆದೇಶ ಹೀಗಿದೆ: ಜನರೊಂದಿಗೆ ಅವರ ಬುದ್ಧಿಗೆ ತಕ್ಕಂತೆ ಮಾತನಾಡಿರಿ. ಮತ್ತೊಂದು ಅಂಶವೆಂದರೆ, ದೌರ್ಜನ್ಯಕ್ಕೊಳಗಾದವರ ಶಾಪ ಪ್ರಾರ್ಥನೆಯಿಂದ ದೂರವಿರಬೇಕು. ತಬ್ಲೀಗ್ ಮಾಡುವವರ ಸ್ವಭಾವಗುಣ ಯಾವಾಗಲೂ ಉತ್ತಮ ಮತ್ತು ಉನ್ನತವಾಗಿರಬೇಕು ಮತ್ತು ಮನುಷ್ಯರ ಹಕ್ಕುಗಳಿಗೆ ಸಂಬಂಧಿಸಿ ಇರಬೇಕಾದ ಮಾನದಂಡವೇನೆಂದರೆ, ಅವರು ಎಂದಿಗೂ ಯಾವುದೇ ದೌರ್ಜನ್ಯಕ್ಕೊಳಗಾದವರ ಶಾಪಕ್ಕೆ ಈಡಾಗುವಂತೆ ಆಗಬಾರದು. ಅದರಿಂದ ದೂರವಿರಬೇಕು. ಏಕೆಂದರೆ ಅಂಥವರ ಪ್ರಾರ್ಥನೆ ಮತ್ತು ಅಲ್ಲಾಹನ ನಡುವೆ ಯಾವುದೇ ತಡೆಯಿರುವುದಿಲ್ಲ.

(ಹುಝೂರ್ ಹೇಳಿದರು,) ಒಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸುಳ್ಳಾರೋಪಗಳನ್ನು ಯುಕ್ತಿ ಮತ್ತು ಉತ್ತಮ ಮಾತುಗಳೊಂದಿಗೆ ಉತ್ತರಿಸುವುದು ನಮ್ಮ ಮೇಲೆ ಅಲ್ಲಾಹನು ಕಡ್ಡಾಯಗೊಳಿಸಿದ್ದಾನೆ. ನಮ್ಮ ತಬ್ಲೀಗ್ ನೈತಿಕತೆಯ ವ್ಯಾಪ್ತಿಯಲ್ಲಿಯೇ ಇರಬೇಕು ಎಂಬುದನ್ನು ನೆನಪಿನಲ್ಲಿಡಬೇಕು. ಹಝ್ರತ್ ಮಸೀಹ್ ಮೌಊದ್(ಅ) ಕೂಡ ಕೆಲವೆಡೆ ಕಠಿಣ ಪದಗಳನ್ನು

ಬಳಸಿದ್ದಾರೆ ಎಂದು ಕೆಲವರು ಹೇಳುತ್ತಾರೆ. ಮೊದಲ ವಿಷಯವೆಂದರೆ, ಅವರು ಕಠಿಣತೆಯನ್ನು ತೋರಿಸಿಲ್ಲ. ಜಮಾಅತಿನ ಸದಸ್ಯರು ಕಠಿಣ ಪದಗಳನ್ನು ಬಳಸಬಾರದು ಎಂದು ಅವರು ತಮ್ಮ ವಿವಿಧ ಕೃತಿಗಳಲ್ಲಿ ಹೇಳಿದ್ದಾರೆ. ಅವರು ಹೀಗೆ ಹೇಳಿದ್ದರು: "ಕೆಲವೆಡೆ ನಾನು ಈ ಪದಗಳನ್ನು ಕೆಲವು ಅನಿವಾರ್ಯತೆಗಳಿಂದಾಗಿ ಬಳಸಿದ್ದೇನೆ. ಅದು ಸಹ ನಾನು ಅವರ ಚರಿತ್ರೆಗೆ ಸಂಬಂಧಿಸಿ ಹೇಳಿದ್ದೇನೆ. ಅವರಂತೆ ಬೈಗುಳ ಅಥವಾ ಕೊಳಕು ಭಾಷೆಯನ್ನು ನಾನು ಬಳಸಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ತಫ್ಸೀರ್ ಕಬೀರ್‌ನಲ್ಲಿ **"ಉದ್‌ಉ ಇಲಾ ಸಬೀಲಿ ರಬ್ಬಿಕ ಬಿಲ್ ಹಿಕ್ಮತಿ"** ಎಂಬ ವಚನಕ್ಕೆ ವಿವರಣೆಯನ್ನು ನೀಡಿದ್ದಾರೆ. ಅವರು ಬಹಳ ದುಃಖದಿಂದ ಹೀಗೆ ಹೇಳಿದ್ದರು: ಈ ಸೂತ್ರವನ್ನು ಮುಸಲ್ಮಾನರು ಅರ್ಥಮಾಡಿಕೊಂಡಿದ್ದರೆ, ಯಹೂದಿ ಧರ್ಮ ಮತ್ತು ಕ್ರೈಸ್ತ ಧರ್ಮವನ್ನು ಕೊನೆಗೊಳಿಸಬಹುದಾಗಿತ್ತು. ನಮ್ಮ ಆಯುಧ ಪವಿತ್ರ ಖುರ್‌ಆನ್ ಆಗಿದೆ. ಈ ಖುರ್‌ಆನಿನ ಖಡ್ಗವನ್ನು ಎತ್ತಿಕೊಂಡು ಲೋಕದಲ್ಲಿ ಜಿಹಾದ್‌ಗಾಗಿ ಹೊರಡಲು ಅಲ್ಲಾಹನು ಹೇಳುತ್ತಾನೆ. ಆದರೆ ದುರದೃಷ್ಟವಶಾತ್, ಇಂದು ಲೋಕದ ಪ್ರತಿಯೊಂದು ವಸ್ತು ಮುಸ್ಲಿಮರ ಕೈಯಲ್ಲಿದೆ, ಆದರೆ ಯಾವುದನ್ನು ತೆಗೆದುಕೊಂಡು ಹೊರಡುವಂತೆ ಅಲ್ಲಾಹನು ಆದೇಶಿಸಿದ್ದನೋ ಆ ಖಡ್ಗ ಮಾತ್ರ ಅವರ ಕೈಯಲ್ಲಿ ಇಲ್ಲ.

ಈಗ ಇಸ್ಲಾಮಿನ ಸಂದೇಶವನ್ನು ಲೋಕ ಜನರಿಗೆ ಹೇಳಿಕೊಡುವುದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಕೆಲಸವಾಗಿದೆ. ಧರ್ಮದಲ್ಲಿ ಕೇವಲ ಶುಷ್ಕ ವಾದಗಳಿಲ್ಲ, ಬದಲಾಗಿ ಪಾಲಿಸಬೇಕಾದ ಉಪದೇಶದ ವಿವಿಧ ಆಯಾಮಗಳಿವೆ. ಅವನ್ನು ಪಾಲಿಸಬೇಕು. ಭಾವನಾತ್ಮಕ ಮಾತುಗಳನ್ನು ಕೂಡ ಹೇಳಿಕೊಡಬೇಕು ಮತ್ತು ಯುಕ್ತಿಯಿಂದ ಉತ್ತಮ ರೀತಿಯಲ್ಲಿ ಉಪದೇಶಿಸಬೇಕು.

ಅಲ್ಲಾಹನು ಹೇಳುತ್ತಾನೆ: ನೀವು ಉತ್ತಮ ರೀತಿಯಲ್ಲಿ ತಬ್ಲೀಗ್ ಮಾಡುತ್ತಾ ಇರಿ. ಆದರೆ ಜನರು ನಂಬದಿದ್ದರೆ, ನಮಗೆ ತಬ್ಲೀಗ್ ಮಾಡಲು ಬರುವುದಿಲ್ಲ ಎಂದು ತೀರ್ಮಾನಿಸಿ ನಿರಾಶರಾಗಬೇಡಿರಿ. ಏಕೆಂದರೆ ನಿಮ್ಮ ತಬ್ಲೀಗಿನಲ್ಲಿ ಯಾವುದೇ ದೋಷವಿಲ್ಲದಿರಬಹುದು, ಆದರೆ ಆ ವ್ಯಕ್ತಿಯ ಮನಸ್ಸಿನ ಮೇಲೆ ಆತನ ಪಾಪಗಳ ತುಕ್ಕು ಆವರಿಸಿರುವುದರಿಂದ, ಅಲ್ಲಾಹನು ಆತನಿಗೆ ಮಾರ್ಗದರ್ಶನದ ಕಿಟಕಿಯನ್ನು ತೆರೆಯದೇ ಇದ್ದಿರಬಹುದು. ಸಂಕ್ಷಿಪ್ತವಾಗಿ, ತಬ್ಲೀಗ್ ಮಾಡುವುದರಲ್ಲಿ ನಿರತರಾಗಿರಬೇಕು. ಇದೇ ಮುಖ್ಯ ವಿಷಯವಾಗಿದೆ. ನಮ್ಮ ಕೆಲಸ ತಬ್ಲೀಗ್ ಮಾಡುತ್ತಾ ಇರುವುದಾಗಿದೆ. ಫಲಿತಾಂಶವನ್ನು ನೀಡುವುದು ಮತ್ತು ಪ್ರಭಾವ ಉಂಟುಮಾಡುವುದು ಅಲ್ಲಾಹನ ಕೆಲಸವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೀವು ನನ್ನ ಮಾತನ್ನು ಕೇಳಿರಿ ಮತ್ತು ಚೆನ್ನಾಗಿ ನೆನಪಿನಲ್ಲಿಡಿರಿ, ಮನುಷ್ಯನ ಮಾತು ಪ್ರಾಮಾಣಿಕವಲ್ಲದಿದ್ದರೆ ಮತ್ತು ಆಡುವ ಮಾತಿನಂತೆ ನಡೆಯದಿದ್ದರೆ ಅದು ಪರಿಣಾಮಕಾರಿಯಲ್ಲ. ಅವರು ಇನ್ನೊಂದೆಡೆ ಹೇಳುತ್ತಾರೆ: ಸತ್ಯವಿಶ್ವಾಸಿಯ ಮಾತು ಮತ್ತು ಕೃತಿ ಬೇರೆ ಬೇರೆಯಾಗಿರಬಾರದು. ಆಗಲೇ ತಬ್ಲೀಗ್‌ನಲ್ಲಿ ಅನುಗ್ರಹ ಉಂಟಾಗುವುದು. ಮತ್ತೊಂದೆಡೆ ಅವರು ಹೇಳಿದರು: ಒಂದೇ ಮಾತನ್ನು ಒಂದು ಶೈಲಿಯಲ್ಲಿ ಹೇಳಿದರೆ ಒಬ್ಬ ವ್ಯಕ್ತಿಯನ್ನು ಶತ್ರುವನ್ನಾಗಿ ಮಾಡಬಹುದು ಅಂತೆಯೇ ಮತ್ತೊಂದು ಶೈಲಿಯಲ್ಲಿ ಅದನ್ನು ಹೇಳಿದರೆ ಸ್ನೇಹಿತನನ್ನಾಗಿ ಮಾಡಬಹುದು. ಆದ್ದರಿಂದ, **'ವ ಜಾದಿಲ್‌ಹುಮ್ ಬಿಲ್ಲತೀ ಹಿಯ ಅಹ್‌ಸನ್'** – ಅವರೊಂದಿಗೆ ಅತ್ಯುತ್ತಮವಾದ ರೀತಿಯಲ್ಲಿ ವಾದಿಸಿರಿ ಎಂಬ ವಚನಕ್ಕೆ ಅನುಗುಣವಾಗಿ ನಡೆಯಿರಿ. ಈ ಮಾತುಕತೆಯ ಶೈಲಿಯನ್ನು ಅಲ್ಲಾಹನು ಹಿಕ್ಮತ್ ಅಥವಾ ಯುಕ್ತಿ ಎಂದು ಹೆಸರಿಸಿದ್ದಾನೆ.

ಅವರು ಹೇಳುತ್ತಾರೆ: ಮಾತನಾಡುವಾಗ ಯೋಚಿಸಿ ಸಂಕ್ಷಿಪ್ತವಾಗಿ ಉಪಯುಕ್ತ ಮಾತುಗಳನ್ನು ಮಾತ್ರ ಹೇಳಬೇಕು. ಕೆಲವೊಮ್ಮೆ ಸಣ್ಣ ತಮಾಷೆಯನ್ನು ಹೇಳಬೇಕು, ಅದು ನೇರವಾಗಿ ಕಿವಿಗೆ ತಲುಪುತ್ತದೆ. ಅನಂತರ ಮತ್ತೊಮ್ಮೆ ಅವಕಾಶ ಸಿಕ್ಕರೆ ಪುನಃ ಮಾತನಾಡಬಹುದು. ಸಂಕ್ಷಿಪ್ತವಾಗಿ, ಸತ್ಯದ ಸಂದೇಶವನ್ನು ನಿಧಾನವಾಗಿ ತಲುಪಿಸುತ್ತಾ ಇರಬೇಕು ಮತ್ತು ಸುಸ್ತಾಗಬಾರದು. ಆದರೆ ಇತ್ತೀಚಿನ ದಿನಗಳಲ್ಲಿ ಜನರು ಲೌಕಿಕ ಚಿಂತೆಗಳಲ್ಲಿ ಮುಳುಗಿರುವುದರಿಂದ ಮತ್ತು ಅವರಿಗೆ ಅರ್ಥ ಮಾಡಿಸುವುದು ಕಷ್ಟಕರವಾಗಿರುವುದರಿಂದ, ನಮ್ಮ ಉತ್ತಮ ನಡೆವಳಿಕೆಯ ಉದಾಹರಣೆ ಇದ್ದರೆ, ಜನರ ಗಮನವು ತಾನಾಗಿಯೇ ನಮ್ಮ ಕಡೆಗೆ ತಿರುಗುವುದು. ಅವರು ಹೇಳುತ್ತಾರೆ: ನೆನಪಿಡಿ, ಪ್ರತಿ ಬೀಗಕ್ಕೂ ಒಂದು ಕೀಲಿಯಿದೆ. ಮಾತಿಗೂ ಒಂದು ಕೀಲಿಯಿದೆ, ಅದು ಸೂಕ್ತವಾದ ಶೈಲಿಯಾಗಿದೆ. ಎಲ್ಲರೊಂದಿಗೆ ಒಂದೇ ರೀತಿ ಮಾತನಾಡುವುದು ಸರಿಯಲ್ಲ. ತಬ್ಲೀಗ್ ಮಾಡುವವರೊಡನೆ ಯಾರಾದರೂ ಕೆಟ್ಟದಾಗಿ ಮಾತನಾಡಿದರೆ ಬೇಸರಗೊಳ್ಳಬಾರದು, ಬದಲಿಗೆ ತಮ್ಮ ಕೆಲಸವನ್ನು ಮಾಡುತ್ತಾ ಇರಬೇಕು ಮತ್ತು ಸುಸ್ತಾಗಬಾರದು.

ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಜಮಾಅತಿಗೆ ಹೀಗೆ ಮಾರ್ಗದರ್ಶನ ನೀಡಿದರು: ನಮಾಝ್, ಉಪವಾಸ, ಹಜ್ ಮತ್ತು ಝಕಾತ್ ಇಸ್ಲಾಮಿನ ಆದೇಶಗಳಾಗಿದ್ದು, ಅವುಗಳನ್ನು ಎಲ್ಲ ಕಾಲದಲ್ಲಿಯೂ ಪಾಲಿಸುವುದು ಅಗತ್ಯ. ಅದೇ ರೀತಿ ಜಿಹಾದ್ ಸಹ ಅಂತಹ ಕಾರ್ಯಗಳಲ್ಲಿ ಒಂದಾಗಿದೆ, ಅದನ್ನು ಎಲ್ಲ ಕಾಲದಲ್ಲೂ ನಡೆಸುವುದು ಅಗತ್ಯವಾಗಿದೆ. ಈಗ ನಿಮ್ಮ ಜಿಹಾದ್ ಕೇವಲ ಲೇಖನಿಯ ಮೂಲಕದ ಜಿಹಾದ್ ಆಗಿದೆ. ಆದ್ದರಿಂದ, ಈ ರೀತಿ ಲೇಖನಿಯಿಂದ ಜಿಹಾದ್ ಮಾಡಬೇಕು. ಲೋಕದ ಜನರೊಡನೆ ಹೇಳಬೇಕಾಗಿರುವುದೇನೆಂದರೆ, ಒಂದೆಡೆ ಮಸೀಹ್ ಮತ್ತು ಮಹ್‌ದೀ ಆಗಮಿಸಬೇಕಾಗಿದೆ ಎಂದು ನೀವೇ ಒಪ್ಪಿಕೊಳ್ಳುತ್ತೀರಿ, ಮತ್ತೊಂದೆಡೆ ಮಸೀಹ್ ಮತ್ತು ಮಹ್‌ದಿಯಾಗಿ ಆಗಮಿಸಿದ ವ್ಯಕ್ತಿಯನ್ನು ನಿರಾಕರಿಸುತ್ತೀರಿ. ನಾವು ಪದಗಳ ಅರ್ಥಗಳ ಬಗ್ಗೆಗಿನ ಚರ್ಚೆಗಳು ಮತ್ತು ಜಗಳಗಳಲ್ಲಿ ನಿರತರಾದರೆ, ಅದರಿಂದ ಯಾವುದೇ ಪ್ರಯೋಜನವಿಲ್ಲ. ನಮ್ಮ ನಿಜವಾದ ಉದ್ದೇಶ ಇಸ್ಲಾಮನ್ನು ಲೋಕದ ಮೇಲೆ ಜಯಶಾಲಿಯನ್ನಾಗಿ ಮಾಡುವುದಾಗಿದೆ. ಏಕೆಂದರೆ ಹಝ್ರತ್ ಪೈಗಂಬರ್(ಸ) ಇಡೀ ಲೋಕಕ್ಕಾಗಿ ಪ್ರವಾದಿ ಮತ್ತು

ರಸೂಲ್ ಆಗಿ ಆಗಮಿಸಿದ್ದರು. ಇಂದು ನಮ್ಮ ಸಂಖ್ಯೆ ಜಗತ್ತಿನ ಜನಸಂಖ್ಯೆಯ ನಾಲ್ಕನೇ ಒಂದು ಭಾಗಕ್ಕಿಂತಲೂ ಕಡಿಮೆಯಿದೆ. ನಾವು ಲೋಕವನ್ನು ಇಸ್ಲಾಮಿನ ಧ್ವಜದ ಅಡಿಯಲ್ಲಿ ತರುವವರೆಗೆ, ನಾವು "ಬಹಳ ಕೆಲಸ ಮಾಡಿದ್ದೇವೆ" ಎಂದು ಹೇಳಲು ಹೇಗೆ ಸಾಧ್ಯ? ಇಂದು ಈ ರೀತಿಯ ಜಿಹಾದ್ ಮಾಡುವುದು ನಮ್ಮ ಕೆಲಸವಾಗಿದೆ. ಆಗ ಮಾತ್ರ ನಮ್ಮ ಜಿಹಾದ್ ಯಶಸ್ವಿಯಾಗುವುದು.

(ಹುಝೂರ್ ಹೇಳಿದರು:) ನಾನು ಮುಬಲ್ಲಿಗರೊಡನೆ ಹೇಳುತ್ತೇನೆ, ಅವರ ಮೇಲೆ ಒಂದು ದೊಡ್ಡ ಜವಾಬ್ದಾರಿ ಇದೆ. ಅವರು ಕೇವಲ ಜಮಾಅತ್ತಿನ ತರಬೇತಿಯನ್ನು ಮಾತ್ರವಲ್ಲ, ಈ ತರಬೇತಿಯ ಜೊತೆಗೆ ಜನರನ್ನು ಅಲ್ಲಾಹನೊಂದಿಗೆ ಜೋಡಿಸಬೇಕು. ಇದನ್ನು ಮಾಡುವಾಗ ಜನರ ಜ್ಞಾನವನ್ನು ಸಹ ಹೆಚ್ಚಿಸಬೇಕು ಮತ್ತು ಅವರನ್ನು ಈ ಜಿಹಾದ್‌ಗಾಗಿ ಸಿದ್ಧಪಡಿಸಬೇಕು. ಅವರು ಇದನ್ನು ಮಾಡುವಾಗ ಮಾತ್ರ ತಮ್ಮ ಪ್ರತಿಜ್ಞೆಯನ್ನು ಪೂರೈಸಿದಂತಾಗುವುದು.

(ಕೊನೆಯಲ್ಲಿ, ಹಝ್ರತ್ ಮುಸ್ಲಿಹ್ ಮೌಊದ್(ರ) ವಿವಿಧ ಸಂದರ್ಭಗಳಲ್ಲಿ ಮುಬಲ್ಲಿಗ್‌ರಿಗೆ ನೀಡಿದ ಉಪದೇಶಗಳಲ್ಲಿನ ಅಗತ್ಯ ವಿಷಯಗಳ ಸಂಕ್ಷಿಪ್ತ ಸಾರಾಂಶವನ್ನು ಹುಝೂರ್ ಪ್ರಸ್ತುತಪಡಿಸಿದರು. ಹುಝೂರ್ ಹೇಳಿದರು:) ಅವುಗಳಲ್ಲಿ ಆತ್ಮ ಶುದ್ಧೀಕರಣ, ತಹಜ್ಜುದ್ ನಮಾಝ್ ನಿರ್ವಹಣೆ, ಪವಿತ್ರ ಖುರ್‌ಆನಿನ ಆಳವಾದ ಅಧ್ಯಯನ, ದೇವಸ್ಮರಣೆ, ಓದುವ ಅಭ್ಯಾಸ ಮತ್ತು ಅಲ್ಲಾಹನ ಮೇಲೆ ಅತ್ಯಧಿಕ ಭರವಸೆ ಇರಿಸುವುದರ ಕುರಿತು ಪ್ರಸ್ತಾಪಿಸಲಾಗಿದೆ. ಮುಖಸ್ತುತಿ ಮಾಡುವವರು ಆಗಬಾರದು, ಜನರೊಂದಿಗೆ ಸಂಬಂಧಗಳನ್ನು ಉತ್ತಮಗೊಳಿಸಬೇಕು, ಕೆಡುಕನ್ನು ಧೈರ್ಯದಿಂದ ತಡೆಯುವ ಮತ್ತು ಸ್ಥಿರಚಿತ್ತತೆಯ ಅಭ್ಯಾಸ ಇರಬೇಕು. ಮುಬಲ್ಲಿಗರು ಸ್ವತಃ ಉತ್ತಮವಾಗಿ ವರ್ತಿಸುವವರಾದರೆ, ಜಮಾಅತ್ತಿನ ಒಳಗೂ ಖಂಡಿತವಾಗಿಯೂ ಅಂತಹ ಉತ್ಸಾಹ ಉಂಟಾಗುವುದು. ಅದೇ ರೀತಿಯಲ್ಲಿ ಆಲೋಚನೆ ಮತ್ತು ಚಿಂತನೆ ಮಾಡುವ ಅಭ್ಯಾಸ ಇರಬೇಕು. ಅಲ್ಲಾಹನೊಂದಿಗೆ ಸಂಬಂಧವಿರಬೇಕು. ಇವೆಲ್ಲವೂ ಉಂಟಾದರೆ ನಾವು ಒಂದು ಮಹತ್ತಾದ ಬದಲಾವಣೆಯನ್ನು ಉಂಟುಮಾಡಬಹುದಾಗಿದೆ. ಅಲ್ಲಾಹನು ಎಲ್ಲರಿಗೂ ಅದರ ಸೌಭಾಗ್ಯ ನೀಡಲಿ. ತಬ್ಲೀಗ್ ಮಾಡುವವರಿಗೂ ಸರಿಯಾದ ಜ್ಞಾನವನ್ನು ಗಳಿಸಲು ಸೌಭಾಗ್ಯ ನೀಡಲಿ. ಅಲ್ಲಾಹನೊಂದಿಗೆ ಸಂಬಂಧವನ್ನು ಸ್ಥಾಪಿಸುವಂತಾಗಲಿ ಹಾಗೂ ಇಸ್ಲಾಮ್ ಮತ್ತು ಅಹ್ಮದಿಯ್ಯತ್ತಿನ ಸಂದೇಶವನ್ನು ಲೋಕದ ಪ್ರತಿಯೊಂದು ಮೂಲೆಗೂ ತಲುಪಿಸುವವರಾಗಲಿ.

—————————*****—————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)

At, ***'Masjid Mubarak',*** *Islamabad, Tilford,* U.K. On 12-12-2025

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon